ಕ್ರಿಮಿನಲ್ ಮಿಸ್ **ನಂ. :594/2021**

**ಪಿ ಡಬ್ಲ್ಯೂ:1**

**(ಇಂದು ದಿನಾಂಕಃ 07-11-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.)**

**ಪಾಟೀ ಸವಾಲುಃ- ಎದುರುದಾರರ ಪರ ವಕೀಲರಾದ ಶ್ರೀ ಎಸ್ ಆರ್ ಎಂ ರವರಿಂದಃ**

ನಾನು ಮತ್ತು 1ನೇ ಎದುರುದಾರರು ಪ್ರೀತಿಸಿ ವಿವಾಹವಾಗಿರುತ್ತೇವೆ ಎಂದರೆ ಸಾಕ್ಷಿ ಎದುರುದಾರರು ನನಗೆ ದೂರವಾಣಿ ಕರೆ ಮಾಡಿ ಮದುವೆ ಆಗುತೀರಾ ಎಂದು ಕೇಳಿದಾಗ ನಾನು ನನ್ನ ತಾಯಿಯನ್ನು ಕೇಳಬೇಕು ಎಂದು ಹೇಳಿರುತ್ತೇವೆ ಎಂದು ನುಡಿಯುತ್ತಾರೆ. ನಂತರ ನನ್ನ ಮತ್ತು ಎದುರುದಾರರು ಮಾತುಕತೆ ಮಾಡಿ ವಿವಾಹ ಮಾಡಿರುತ್ತಾರೆ. ನನ್ನ ಮತ್ತು ಎದುರುದಾರರ ಕುಟುಂಬ ಒಂದೇ ರಕ್ತ ಸಂಬಂದ ಹೊಂದಿದ ಕುಟುಂಬಗಳಾಗಿರುತ್ತವೆ ಎಂದರೆ ಸರಿ. ಎದುರುದಾರರ ಮನೆಯಲ್ಲಿ 3 ಜನ ಇರುತ್ತಾರೆ ಎಂದರೆ ಸರಿ. 1ನೇ ಎದುರುದಾರರ ಅಕ್ಕನನ್ನು ವಿವಾಹ ಮಾಡಿ ಗಂಡನ ಮನೆಗೆ ಕಳುಹಿಸಿರುತ್ತಾರೆ ಎಂದರೆ ಸರಿ. 1ನೇ ಎದುರುದಾರರ ಅಕ್ಕನ ಊರು ದೊಡ್ಡಬಳ್ಳಾಪುರ ಇರುತ್ತದೆ. ಸದರಿರವರು ದೊಡ್ಡಬಳ್ಳಾಪುರದಲ್ಲಿ ವಾಸವಿರುತ್ತಾರೆ. ನಾನು ವಿವಾಹವಾದ ನಂತರ 8 ತಿಂಗಳ ಕಾಲ 1ನೇ ಎದುರುದಾರರೊಂದಿಗೆ ವಾಸವಿದ್ದೆನು. 8 ತಿಂಗಳ ನಂತರ ನಾನು 1ನೇ ಎದುರುದಾರೊಂದಿಗೆ ವಾಸವಾಗಿಲ್ಲ ಎಂದರೆ ಸಾಕ್ಷಿ ಅವರು ಕರೆದಿಲ್ಲ ಎಂದು ನುಡಿಯುತ್ತಾರೆ. ನಾನು ಗರ್ಭಿಣಿಯಾದ ನಂತರ ನನ್ನ ತಾಯಿ ಮನೆಗೆ ಹೋಗಿರುತ್ತೇನೆ ಎಂದರೆ ಸಾಕ್ಷಿ ಅವರೆ ಕಳುಹಿಸಿರುತ್ತಾರೆ ಎಂದು ನುಡಿಯುತ್ತಾರೆ. ನನ್ನನ್ನು ಮನೆಯಿಂದ ಕಳುಹಿಸಿದ ನಂತರ ತುಮಕೂರಿನಲ್ಲಿ ರಕ್ಷಣಾಧಿಕಾರಿಗಳಿಗಾಗಲೀ ಅಥವಾ ಪೊಲೀಸರಿಗಾಗಲೀ ದೂರು ನೀಡಿರುವುದಿಲ್ಲ. 8 ತಿಂಗಳ ಅವಧಿಯಲ್ಲಿ ನಾನು ಮತ್ತು ಎದುರುದಾರರು ವಾಸವಾಗಿದ್ದೆವು ಎಂದರೆ ಸಾಕ್ಷಿ 1ನೇ ಎದುರುದಾರರ ಅಕ್ಕ ಆಗಾಗ ಬಂದು ಹೋಗುತ್ತಿದ್ದರು ಎಂದು ನುಡಿಯುತ್ತಾರೆ. 1ನೇ ಎದುರುದಾರವರ ಅಕ್ಕ ಹಬ್ಬ ಹರಿದಿನಗಳನ್ನು ಹೊರತು ಪಡಿಸಿ ಬೇರೆ ಸಮಯದಲ್ಲಿ ಬರುತ್ತಿರಲಿಲ್ಲ ಎಂದರೆ ಸರಿಯಲ್ಲ. 1ನೇ

ಎದುರುದಾರರವರ ಅಕ್ಕ ಆಗಾಗೆ ಬರುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು 8 ತಿಂಗಳ ಕಾಲ ಚೆನ್ನಾಗಿ ಇದ್ದೆ ಎಂದರೆ ಸರಿಯಲ್ಲ. ಸಂಸಾರಿಕ ಜೀವನ ಚೆನ್ನಾಗಿದ್ದ ಕಾರಣ ನಾನು ಗರ್ಭಿಣಿಯಾಗಿರುತ್ತೇನೆ ಎಂದರೆ ಸರಿಯಲ್ಲ. ಸದರಿ 8 ತಿಂಗಳ ಅವಧಿಯಲ್ಲಿ ನನ್ನ ತಾಯಿ ತಿಂಗಳಿಗೆ ಒಮ್ಮೆ ಬಂದು ಹೋಗುತ್ತಿದ್ದರು. ನನ್ನ ತಾಯಿ ಬಂದಾಗ ಮನೆಯಲ್ಲಿ ಉಳಿದು ಯೋಗ ಕ್ಷೇಮ ವಿಚಾರಿಸಿಕೊಂಡು ಹೋಗುತ್ತಿದ್ದು ಎಂದರೆ ಸಾಕ್ಷಿ ನನ್ನ ತಾಯಿ ಹಾಗೇ ಬಂದು ಹೋಗುತ್ತಿದ್ದರು ಎಂದು ನುಡಿಯುತ್ತಾರೆ. 1 ನೇ ಎದುರುಪಾರರ ಬೇರೆ ಮದುವೆ ಆಗುವುದಾಗಿ ಹೇಳಿರುವುದಾಗಿ ಪ್ಯಾರಾ 5 ರಲ್ಲಿ ತಿಳಿಸಿರುತೀರಿ ಎಂದರೆ ಸಾಕ್ಷಿ ಅವರು ವಿಚ್ಛೇದನ ಕೇಳುತ್ತಿದ್ದರು ಎಂದು ನುಡಿಯುತ್ತಾರೆ.

ಸೆಪ್ಟಂಬರ್ ತಿಂಗಳ ಗಣೇಶ ಹಬ್ಬದ ದಿನ ಬೇಲೂರು ಪೊಲೀಸ್ ಠಾಣಗೆ ದೂರು ನೀಡಿರುತ್ತೇನೆ. ದೂರು ನೀಡಿದ ಕಾಲಕ್ಕೆ ನಾನು ತಾಯಿಯೊಂದಿಗೆ ಬೇಲೂರಿನಲ್ಲಿ ವಾಸವಾಗಿದ್ದೆ ಎಂದರೆ ಸರಿ. ಆ ಸಮಯದಲ್ಲಿ ಡೆಲವರಿಯಾಗಿತ್ತು. ಡೆಲವರಿಗೆ ಬಂದ ನಂತರ 1ನೇ ಎದುರುದಾರರ ಮನೆಗೆ ವಾಪಸ್ಸು ಬಂದಿಲ್ಲ ಎಂದರೆ ಸಾಕ್ಷಿ ನನ್ನನ್ನು ಕರೆದಿಲ್ಲ ಎಂದು ನುಡಿಯುತ್ತಾರೆ. ನನ್ನನ್ನು 1ನೇ ಎದುರುದಾರರ ಮನೆಗೆ ಕರೆದುಕೊಂಡು ಹೋಗಬೇಕು ಎನ್ನುವ ಬಗ್ಗೆ 2 ಕುಟುಂಬದ ನಡುವೆ ಪಂಚಾಯಿತಿ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಪಂಚಾಯಿತಿಯನ್ನು ನಾನು ಮತ್ತು ನನ್ನ ತಾಯಿ ತಿರಿಸ್ಕರಿಸಿರುತ್ತೇವೆ ಎಂದರೆ ಸರಿಯಲ್ಲ.

(ಮುಂದುವರಿದ ಪಾಟೀ ಸವಾಲಿಗೆ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

(ನಾಗೇಂದ್ರ)
ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ನ್ಯಾಯಾಲಯ, ಬೇಲೂರು